**ಡಿಡಬ್ಲ್ಯೂ-1**

**ದಿನಾಂಕ: 04-02-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಪಿ. ವಕೀಲರಿಂದ:-**

ನಿಡಿ-1 ನ್ನು ನನ್ನ ತಾಯಿ ಜೀವಂತ ಇದ್ದಾಗ ಕೊಟ್ಟಿರುವ ದಾಖಲೆ ಎಂದರೆ ಸರಿ. ನಿಡಿ-2 ರಿಂದ 4 ನ್ನು ನನ್ನ ತಂದೆ ತಿಮ್ಮೇಗೌಡರಿಗೆ ನೀಡಿದ ಅಂತಿಮ ತಿಳುವಳಿಕೆ ನೋಟೀಸು ಎಂದರೆ ಸರಿ. ನಿಡಿ-6 ಮತ್ತು 7 ನ್ನು ನಮ್ಮ ತಂದೆ ಸಾಲ ತೀರಿಸಿದ ದಾಖೆಗಳು ಎಂದರೆ ಸರಿಯಲ್ಲ ನಾನು ತೀರಿಸಿರುತ್ತೇನೆ. 2006 -07 ರಿಂದ ನಾನು ನನ್ನ ತಾಯಿ ಜೊತೆ ವಾಸವಿದ್ದು ದಾವಾ ಜಮೀನುಗಳನ್ನು ನಾನೇ ಉಳುಮೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ ನನ್ನ ತಾಯಿ ಮಾಡುತ್ತಿದ್ದರು. ದಾವಾ ಜಮೀನುಗಳಿಂದ ಬಂದಂತಹ ಆದಾಯದಿಂದ ಸಾಲ ತೀರಿಸಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವೈದ್ಯಕೀಯ ದಾಖಲೆಗಳು ಸರ್ಕಾರಿ ಆಸ್ಪತ್ರೆಯಲ್ಲಿ ನಮ್ಮ ತಾಯಿಗೆ ಚಿಕಿತ್ಸೆ ಕೊಟ್ಟ ದಾಖಲೆಗಳು ಎಂದರೆ ಸಾಕ್ಷಿ ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಕೊಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ನನ್ನ ತಾಯಿಯ ಬಳಿ ಬಿ.ಪಿ. ಎಲ್. ಕಾರ್ಡ್ ಇರುವ ಕಾರಣ ನನ್ನ ತಾಯಿಗೆ ಸಂಪೂರ್ಣ ಉಚಿತ ಚಿಕಿತ್ಸೆ ಕೊಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣದ ನಂತರ ನಾನು ದಾವಾಸ್ತಿಗಳನ್ನು ಉಳುಮೆ ಮಾಡುತ್ತಿದ್ದೇನೆ. ದಿ:13-02-2020 ರಂದು ನನ್ನ ತಾಯಿ ಮರಣ ಹೊಂದಿರುತ್ತಾರೆಂದರೆ ಸರಿ. ದಾವಾಸ್ತಿಗಳಲ್ಲಿ 200 ತೆಂಗಿನ ಮರಗಳು ಇವೆ ಎಂದರೆ ಸರಿಯಲ್ಲ. 50 ಮರಗಳು ಇದ್ದು ಅವುಗಳು ಬಿದ್ದು ಹೋಗಿದ್ದು 10 ಸಾವಿರ ಪರಿಹಾರ ಹಣ ಪಡೆದಿರುತ್ತೇನೆ. ಅದನ್ನು ನನ್ನ ತಾಯಿಯ ಚಿಕಿತ್ಸೆಗಾಗಿ ಖರ್ಚು ಮಾಡಿರುತ್ತೇನೆ. ದಾವಾ ಜಮೀನುಗಳಲ್ಲಿ ನಾನು ಪ್ರತಿವರ್ಷ ಕೇಂದ್ರ ಸರ್ಕಾರದಿಂದ 20 ಸಾವಿರ ಸಹಾಯ ಧನ ಪಡೆಯುತ್ತಿದ್ದೇನೆಂದರೆ ಸರಿಯಲ್ಲ. ಕಳೆದ 3 ವರ್ಷಗಳಿಂದ ನಾನು 2 ಸಾವಿರ ರೂ.ಪಡೆಯುತ್ತಿದ್ದೇನೆ. ನಾನು ಸಾಲ ಪಡೆದ ಬಗ್ಗೆ ದಾಖಲೆಗಳು ಇವೆ. ನಿಡಿ-14 ರ ಸಾಲ ಪಡೆದಾಗ ಆ ಸೊಸೈಟಿಗೆ ನಾನು ಮತ್ತು ನನ್ನ ತಾಯಿ ಚೆಕ್ ಗಳನ್ನು ಕೊಟ್ಟಿದ್ದೆವು. ನಿಡಿ-14 ನ್ನು ಕೊಟ್ಟ ವ್ಯಕ್ತಿಯ ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ. ನಿಡಿ-

14 ರಲ್ಲಿ ದಿನಾಂಕ ನಮೂದು ಇಲ್ಲ ಎಂದರೆ ಸರಿಯಲ್ಲ 2020 ರ ಇಸವಿಯನ್ನು ಹಾಕಿರುತ್ತಾರೆ. ನನ್ನ ತಮ್ಮ ಜಯಣ್ಣನ ವಿವಾಹ ವಿಚ್ಛೇದನವು 2006 ರಲ್ಲಿ ಆಗಿರುತ್ತದೆ. ಅಲ್ಲಿಂದ ನಿಡಿ-14 ರಲ್ಲಿ ತೋರಿಸಿದ ಸಾಲ ಮತ್ತು ಬಡ್ಡಿ ತೀರಿಸುತ್ತಾ ಬಂದಿರುತ್ತೇನೆ. ಇಲ್ಲಿಯವರೆಗೂ ನಿಡಿ-14 ರಲ್ಲಿ ತೋರಿಸಿದ ಡೈರಿಯವರು ಸಾಲ ತೀರಿಸುವಂತೆ ನೋಟೀಸು ಕೊಟ್ಟಿರುವುದಿಲ್ಲ. ಸದರಿ ಡೈರಿ ಇನ್ನು ಚಾಲ್ತಿಯಲ್ಲಿದೆ. ಸದರಿ ಡೈರಿಯನ್ನು ಅದರ ಕಾರ್ಯದರ್ಶಿ ಶಶಿ ಎನ್ನುವವರು ನಡೆಸುತ್ತಿದ್ದಾರೆ. ನಾನು ಮೋಸದಿಂದ ದಾನಪತ್ರ ಪಡೆದ ಜಮೀನಿನಲ್ಲಿ ನಾನು ಸಾಕಷ್ಟು ಆದಾಯ ಪಡೆಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಜಮೀನುಗಳಿಂದ ಬಂದ ಆದಾಯವನ್ನು ಕಳೆದ 20 ವರ್ಷಗಳಿಂದ ನಾನೇ ಪಡೆಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **04-02-2026.**